Mr. SPEAKER.—You had put this question some time back, I remember.

ಶ್ರೀ ಎಂ. ಸಿ. ಆಂಜನೇಯ ರೆಡ್ಡಿ.—ನನ್ನ ಪ್ರಶ್ನೆ ಸ್ಪಷ್ಟವಾಗಿ ಇದೆ.....

Mr. SPEAKER.—There is a recent Government Order. You can refer to it.

ಶ್ರೀ ಎಂ. ಸಿ. ಆಂಜನೇಯ ರೆಡ್ಡಿ.—ಹರಿಜನರನ್ನು ಅಲ್ಲಿಂದ ಒಡಿಸಬೇಕೆಂದು ಸರ್ಕಾರದ ಆರ್ಡರ್ ಆಗಿದೆಯೇ ಎಂದು ಕೇಳಿರುವುದಕ್ಕೆ ಆ ವಿಧವಾದ ಹುಕುಂಗಳನ್ನು ಸರ್ಕಾರದವರು ಸಾದರ್ಶಾಡಿರುವುದಿಲ್ಲ ಎಂದು ಹೇಳಿದ್ದೀರಿ. ಸರ್ವೇ ನಂಬರ್ 72ರಲ್ಲಿ ಅವರಿಗೆ ರಿಸರ್ವ್ ಮಾಡಿದೆ ಎಂದು ತಮ್ಮ ಆರ್ಡರ್ ಆಗಿದೆಯೇ ಸ್ವಾಮಿ?

ಶ್ರೀ ಟಿ. ಚನ್ನಯ್ಯ.—ಈಗಿರತಕ್ಕ ಜಾಗದಲ್ಲಿ ಸ್ವಲ್ಪ ಭಾಗ ಮಾತ್ರ ಹರಿಜನರಿಗೆ ಕೊಡಬೇಕೆಂಬುದಾಗಿಯೂ ಮತ್ತು ಈಗ ರುಕ್ಮಾಪುರಾಯರ ಸೈಟಿಗೆ ಸರಿಯಾಗಿ ಒಂದು row of shops ಮುನಿಸಿಪಾಲಿಟಿಯವರು ಕಟ್ಟಬೇಕೆಂದೂ ಕೇಳಿದ್ದಾರೆ. ಅವರಿಗೆ ಆ ಜಾಗ ಕೊಟ್ಟು ಕೆಲವು ಜಾಗವನ್ನು ಹರಿಜನರಿಗೆ ಕೊಡಬೇಕೆಂಬುದಾಗಿ ಸರ್ಕಾರಿ ಆರ್ಡರ್ ಹೊರಡಿಸಲಾಗಿದೆ. ಸಾಲದೇ ಹೋದ ಪಕ್ಷದಲ್ಲಿ 71ನೇ ಸರ್ವೇ ನಂಬರ್‌ನಲ್ಲಿ ಸಾಕಾದಷ್ಟು ಜಾಗ ಕೊಡಬೇಕೆಂಬುದಾಗಿ ಆರ್ಡರ್ ಆಗಿದೆ. ಈ ಎರಡು ಸರ್ವೇ ನಂಬರುಗಳಲ್ಲೂ ಕೊಡಬೇಕೆಂಬ ಉದ್ದೇಶವಿದೆ.

ಶ್ರೀ ಎಂ. ಸಿ. ಆಂಜನೇಯ ರೆಡ್ಡಿ.—ಸೊಣಶೆಟ್ಟಿಹಳ್ಳಿ ಸರ್ವೇ ನಂಬರು ಚಿಂತಾಮಣಿ ಬೌಂಡರಿಗೆ ಪಕ್ಕದಲ್ಲೇ ಇದೆ ಎಂಬುದು ಗೊತ್ತೇ?

ಶ್ರೀ ಟಿ. ಚನ್ನಯ್ಯ.—ಇರಬಹುದು.

ಶ್ರೀ ಎಂ. ಸಿ. ಆಂಜನೇಯ ರೆಡ್ಡಿ.—ಅಲ್ಲಿಂದ ಇನ್ನೂ ಆಚೆಗೆ ಕಳುಹಿಸಬೇಕೆಂದು ಅಭಿಪ್ರಾಯವೇ, ಸ್ವಾಮಿ?

Mr. SPEAKER.—No, no. You have not followed; I have seen the Government Order and it says that the first two rows are reserved for shops and the remaining portion in both survey numbers are to be granted to the Harijans.

ಶ್ರೀ ಎಂ. ಸಿ. ಆಂಜನೇಯ ರೆಡ್ಡಿ.—ಈಗ ಅಲ್ಲಿರತಕ್ಕ ಹರಿಜನರು ಆ ಜಾಗವನ್ನು ಬಿಟ್ಟುಬಿಡಬೇಕೆಂದೂ, ಇಲ್ಲದೇ ಇದ್ದರೆ ಆ ಮನೆಗಳನ್ನು ಒಡೆಸಿಹಾಕಲಾಗುತ್ತದೆಂದೂ ನೋಟೀಸ್ ಕೊಟ್ಟಿರುವುದು ತಮ್ಮ ಗಮನಕ್ಕೆ ಬಂದಿದೆಯೇ?

ಶ್ರೀ ಟಿ. ಚನ್ನಯ್ಯ.—ಬಂದಿಲ್ಲ.

1 P.M.

ಶ್ರೀ ಕೆ. ಪ್ರಭಾಕರ್.—ಅಂಗಡಿಗಳಿಗೆ ಅವಕಾಶ ಕೊಟ್ಟರೂ ಹಿಂಭಾಗವನ್ನು ಹರಿಜನರಿಗೆ ಕೊಟ್ಟಿದ್ದರೆ ಏನು ತೊಂದರೆಯಾಗುತ್ತಿತ್ತು?

ಶ್ರೀ ಟಿ. ಚನ್ನಯ್ಯ.—ಆ ಸ್ಥಳದಲ್ಲಿ ಹಿಂದೆ cattle fair ನಡೆಯುತ್ತಿತ್ತು, ಅದನ್ನು ಅಂಗಡಿಗಳಿಗೋಸ್ಕರ ಕೊಟ್ಟರೆ ಹೆಚ್ಚು ಹೆಚ್ಚು ವರಮಾನ ಬರುತ್ತದೆ ಎಂದು ಪೌರಸಭೆಯವರು ನಿರ್ಣಯ ಮಾಡಿ ಸರ್ಕಾರಕ್ಕೆ ಕಳುಹಿಸಿದ್ದರು.

ಶ್ರೀ ಕೆ. ಪ್ರಭಾಕರ್.—ವರಮಾನ ಒಂದೇ ನೋಡಬಾರದು, ಹರಿಜನರ ಅಭಿವೃದ್ಧಿಗಾಗಿ ಕೊಡಲೇಬೇಕು ಎಂದು ಸರ್ಕಾರ ಹೇಳಬಹುದಾಗಿತ್ತು.

Ambulance van, General Hospital, Tumkur.

Q.—1026. **Sri T. N. MUDALAGIRI GOWDA** (Kunigal).—

Will the Government be pleased to state :—

(*a*) whether there is an ambulance van attached to the General Hospital, Tumkur;

(*b*) when the abovesaid van was purchased; and for what amount;

(*c*) the amount so far spent for its repairs; and the amount paid by the District Board:

(*d*) the number of patients outside the town limits that have been served by this van for the past three years; of them how many are poor people;

(*e*) the charges collected from the poor people;

(*f*) the number of days and the duration during which the van was lying idle without use and under repairs?

A.—**Sri T. CHANNIAH** (Minister for Public Health and Local Self-Government).—

(*a*) Yes.

(*b*) 2nd September 1946; Rs. 8,000.

(*c*) (i) Rs. 562.

(ii) No amount is paid by the District Board, Tumkur, towards repairs.

(*d*) (i) 115,

(ii) It is not possible to state how many of these are poor.

(*e*) This does not arise in view of reply to clause (*d*).

(*f*) Since 9th August 1953.

ಶ್ರೀ ಟಿ. ಎಚ್. ಮೂಡಲಗಿರಿಗೌಡ.—1946ನೆಯ ಇಸವಿಯಿಂದ ಈ ವ್ಯಾನು ಎಷ್ಟುಸಾರಿ ರಿಪೇರಿಗೆ ಹೋಗಿದೆ?

ಶ್ರೀ ಟಿ. ಚನ್ನಯ್ಯ.—ಒಂದೆರಡು ಸಾರಿ.

ಶ್ರೀ ಟಿ. ಎಚ್. ಮೂಡಲಗಿರಿಗೌಡ.—ಈಗ ಆಗಸ್ಟ್ ತಿಂಗಳಿನಿಂದ ಒಂದೇಸಾರಿಯೇ ಕಳುಹಿಸಿರುವುದು?

ಶ್ರೀ ಟಿ. ಚನ್ನಯ್ಯ.—ಹೌದು.

ಶ್ರೀ ಟಿ. ಎಚ್. ಮೂಡಲಗಿರಿಗೌಡ.—ಈ 562 ರೂಪಾಯಿಗಳು ಯಾವ ರೀತಿಯಲ್ಲಿ ಖರ್ಚಾಗಿರುವುದು?

ಶ್ರೀ ಟಿ. ಚನ್ನಯ್ಯ.—ಮೊದಲು 383 ರೂಪಾಯಿಗಳ Estimateಗೆ ಟೆಂಡರು ಕರೆದಿತ್ತು. ಅನಂತರ ಎಲ್ಲಾ ಭಾಗಗಳನ್ನೂ ನೋಡಿ ಸರಿಪಡಿಸಬೇಕಾದ ಭಾಗಗಳನ್ನು ಸರಿಪಡಿಸಿ ಮೊದಲನ ಎಸ್ಟಿಮೇಟಿಗಿಂತ 179 ರೂಪಾಯಿಗಳು ಹೆಚ್ಚಾಗಿ ಖರ್ಚಾಯಿತೆಂದು

(ಶ್ರೀ ಟಿ. ಚನ್ನಯ್ಯ.)

ಅನಂತರ ಬಿಲ್ಲಿನಿಂದ ತಿಳಿದುಬಂತು. ಒಟ್ಟು 562 ರೂಪಾಯಿಗಳು ರಿಪೇರಿಗಾಗಿ ಖರ್ಚಾಗಿದೆ.

ಶ್ರೀ ಟಿ. ಎಚ್. ಮೂಡಲಗಿರಿಗೌಡ.—ಆಗಸ್ಟ್ 1953ರಿಂದ ಕೆಟ್ಟುಹೋದಾಗ ಈ 562 ರೂಪಾಯಿಗಳು ಖರ್ಚಾಗಿವೆಯೋ ಅಥವಾ ಹಿಂದೆ ಖರ್ಚಾಗಿರುವುದೂ ಸೇರಿದೆಯೋ ?

ಶ್ರೀ ಟಿ. ಚನ್ನಯ್ಯ.—ಆಗಸ್ಟಿನಲ್ಲಿ ರಿಪೇರಿ ಮಾಡಿದಾಗ ಕೊಟ್ಟಿರುವುದು.

ಶ್ರೀ ಟಿ. ಎಚ್. ಮೂಡಲಗಿರಿಗೌಡ.—ಈಗ ಅದು ಸಿದ್ಧವಾಗಿದೆಯೇ ?

ಶ್ರೀ ಟಿ. ಚನ್ನಯ್ಯ.—ಆಗಿಲ್ಲವೆಂದು ಗೊತ್ತಾಗಿದೆ.

ಶ್ರೀ ಟಿ. ಎಚ್. ಮೂಡಲಗಿರಿಗೌಡ.—ಹಾಗಾದರೆ ಇಷ್ಟು ಹಣ ಖರ್ಚಾಗಿದೆಯೆಂದು ಹೇಗೆ ಗೊತ್ತಾಯಿತು ?

ಶ್ರೀ ಟಿ. ಚನ್ನಯ್ಯ.—ಹಣ ಖರ್ಚುಮಾಡಿರುವುದರ ಮಂಜೂರಾತಿಗಾಗಿ ಸರ್ಕಾರಕ್ಕೆ ಬಂದಿತ್ತು.

ಶ್ರೀ ಟಿ. ಎಚ್. ಮೂಡಲಗಿರಿಗೌಡ.—ಎಲ್ಲಿ ರಿಪೇರಿಗೆ ಕೊಟ್ಟಿರುವುದು ?

ಶ್ರೀ ಟಿ. ಚನ್ನಯ್ಯ.—ಮೆಸರ್ಸ್ ವೆಬ್ಸ್ ಸೇಲ್ಸ್ ಸರ್ವಿಸ್‌ಗೆ.

ಶ್ರೀ ಟಿ. ಎಚ್. ಮೂಡಲಗಿರಿಗೌಡ.—ಈಗ ಅದು ಎಷ್ಟು ದಿವಸಗಳಲ್ಲಿ ರಿಪೇರಿಯಾಗುತ್ತದೆ ?

Sri T. CHANNIAH.—As soon as possible.

ಶ್ರೀ ಟಿ. ಎಚ್. ಮೂಡಲಗಿರಿಗೌಡ.—ಈಗ ಏಳೆಂಟು ತಿಂಗಳಿಂದ ಅಲ್ಲಿ ವ್ಯಾನಿಗೆ ಏನು ಏರ್ಪಾಡುಮಾಡಿದೆ ?

ಶ್ರೀ ಟಿ. ಚನ್ನಯ್ಯ.—ಏನೂ ಮಾಡಿಲ್ಲ.

ಶ್ರೀ ಟಿ. ಎಚ್. ಮೂಡಲಗಿರಿಗೌಡ.—ಮಾಡಬೇಕಾದದ್ದು ಅಗತ್ಯವಲ್ಲವೆ ?

ಶ್ರೀ ಟಿ. ಚನ್ನಯ್ಯ.—ಬೇರೆ ವ್ಯಾನು ಕೊಡಲು ಸಾಧ್ಯವಾಗಲಿಲ್ಲ.

ಶ್ರೀ ಟಿ. ಎಚ್. ಮೂಡಲಗಿರಿಗೌಡ.—ಡಿಸ್ಟ್ರಿಕ್ಟ್ ಬೋರ್ಡಿನವರು ಈ ವ್ಯಾನು ಕೊಳ್ಳಲು ಹಣ ಕೊಟ್ಟಿದ್ದಾರೆಯೇ ?

Sri T. CHANNIAH.—Notice please.

ಶ್ರೀ ಟಿ. ಎಚ್. ಮೂಡಲಗಿರಿಗೌಡ.—ಈ ವ್ಯಾನನ್ನು ಈಗ ಇಲ್ಲದಿರುವುದರಿಂದ ಸಾರ್ವಜನಿಕರಿಗೆ ತೊಂದರೆಯಾಗಿದೆಯೆಂಬುದನ್ನು ಸರ್ಕಾರದವರು ಯೋಚನೆ ಮಾಡುತ್ತೀರಾ ?

Mr. SPEAKER.—That is obvious.

ಶ್ರೀ ಟಿ. ಎಚ್. ಮೂಡಲಗಿರಿಗೌಡ.—ಈ ವ್ಯಾನು ಜಾಗ್ರತೆ ರಿಪೇರಿ ಮಾಡಿಸಲು ಬೇರೆ ವಿಧವಾದ ಏರ್ಪಾಡು ಮಾಡುತ್ತೀರಾ ?

ಶ್ರೀ ಟಿ. ಚನ್ನಯ್ಯ.—ಯೋಚನೆ ಮಾಡುತ್ತೇವೆ.

ಶ್ರೀ ಎಚ್. ಹುಚ್ಚಮಾಸ್ತಿಗೌಡ.—ಈ ವ್ಯಾನು ರೋಗಿಗಳನ್ನು ಕರೆದುಕೊಂಡು ಬರುವುದಕ್ಕೆ ಅನುಕೂಲವಾಗಿಲ್ಲವೆಂದು ಜಿಲ್ಲಾಬೋರ್ಡಿನವರು ಅಥವಾ ಆಸ್ಪತ್ರೆಯವರು ಮನವಿಮಾಡಿದ್ದಾರೆಯೆ ?

ಶ್ರೀ ಟಿ. ಚನ್ನಯ್ಯ.—ಇಲ್ಲ.

Telugu Primary Schools.

Q.—93. **Sri B. V. NARAYANA REDDY** (Bagepalli-Gudibanda).—

Will the Government be pleased to state :—

the number of Telugu primary schools in the State ?

A.—**Sri Kadidal MANJAPPA** (Minister for Revenue and Public Works) [On behalf of SRI A. G. RAMACHANDRA RAO (Minister for Law and Education)].—Thirteen.

Sri B. V. NARAYANA REDDY.—In view of the Education Minister being not present here, this question may kindly be postponed to Monday, Sir.

Mr. SPEAKER.—The other Ministers are capable of answering it. You may put supplementaries.

ಶ್ರೀ ಬಿ. ವಿ. ನಾರಾಯಣರೆಡ್ಡಿ.—ಉತ್ತರದಲ್ಲಿ 13 ಎಂದು ಹೇಳಿರುವುದು ತೆಲಗು ಜನಾಂಗಕ್ಕೆ ಬಹಳ unlucky ನಂಬರಲ್ಲವೆ ?

ಶ್ರೀ ಕಡಿದಾಳ್ ಮಂಜಪ್ಪ.—ಅಲ್ಲ, ಅದು lucky ನಂಬರು.

ಶ್ರೀ ಬಿ. ವಿ. ನಾರಾಯಣರೆಡ್ಡಿ.—ಆ 13 ಸ್ಕೂಲುಗಳನ್ನು ಎಲ್ಲಿ ಕೊಟ್ಟಿರುವುದು ?

ಶ್ರೀ ಕಡಿದಾಳ್ ಮಂಜಪ್ಪ.—ಕೋಲಾರ ಡಿಸ್ಟ್ರಿಕ್ಟಿನಲ್ಲಿ 7 ಸ್ಕೂಲುಗಳು—ಮುಳಬಾಗಲು ತಾಲ್ಲೂಕಿನಲ್ಲಿ ಮುಳಬಾಗಲು ಟೌನ್ ; ಬಂಗಾರುಪೇಟೆ ತಾಲ್ಲೂಕಿನಲ್ಲಿ ಪೊಂತನಪಲ್ಲಿ, ನಂದೀದುರ್ಗ, ಉರಿಗಾಂ, ಬಾಗೇಪಲ್ಲಿ ತಾಲ್ಲೂಕುಗಳಲ್ಲಿ ಬಲ್ಲೂರು, ಗೊರ್ತಿಪಲ್ಲಿ, ನಲ್ಲೂರು ; ಚಿಕ್ಕಮಗಳೂರು ಡಿಸ್ಟ್ರಿಕ್ಟಿನಲ್ಲಿ ತರೀಕೆರೆ ತಾಲ್ಲೂಕು ಲಕ್ಕವಳ್ಳಿಯಲ್ಲಿ ಒಂದು ಮತ್ತು ಸಿವಿಲ್ ಸ್ಟೇಷನ್ ಬೆಂಗಳೂರಿನಲ್ಲಿ 5 ಸ್ಕೂಲುಗಳು.

ಶ್ರೀ ಬಿ. ವಿ. ನಾರಾಯಣರೆಡ್ಡಿ.—ಸಿವಿಲ್ ಏರಿಯಾದಲ್ಲಿರುವ ಸ್ಕೂಲುಗಳು ಆ ಪ್ರದೇಶ ಮೈಸೂರು ದೇಶಕ್ಕೆ ಸೇರುವುದಕ್ಕೆ ಮುಂಚೆಯೇ ಇದ್ದುವಲ್ಲವೆ ?

ಶ್ರೀ ಕಡಿದಾಳ್ ಮಂಜಪ್ಪ.—ನೋಟೀಸ್.

ಶ್ರೀ ಬಿ. ವಿ. ನಾರಾಯಣರೆಡ್ಡಿ.—ಜನನಂಖ್ಯೆ ಎಷ್ಟು ?

Sri Kadidal MANJAPPA.—I refer the Hon'ble Member to the Census figure.

ಶ್ರೀ ಬಿ. ವಿ. ನಾರಾಯಣರೆಡ್ಡಿ.—ಅಥೆಂಟಿಕ್ಕಾಗಿ ಹೇಳಿ.

Sri Kadidal MANJAPPA.—Notice.

ಶ್ರೀ ಬಿ. ವಿ. ನಾರಾಯಣರೆಡ್ಡಿ.—ಈಗ ಸಾಮಾನ್ಯವಾಗಿ 20 ಲಕ್ಷ ಜನನಂಖ್ಯೆ ಇದೆಯೆಂದು ಹೇಳಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ?

ಶ್ರೀ ಕಡಿದಾಳ್ ಮಂಜಪ್ಪ.—ತಾವು ಹೇಳಿರುವುದು ಗಮನಕ್ಕೆ ಬಂದಿದೆ. ಅದೇ ಅಥಾರಿಟಿ.

Sri B. V. NARAYANA REDDY.—In view of the 20 lakhs of Telugu speaking people in the State, do Government consider that 13 schools are adequate ?

Sri Kadidal MANJAPPA.—I do not admit that it is 20 lakhs.

Sri B. V. NARAYANA REDDY.—In view of so many lakhs of people being Telugu speaking people, do Government consider 13 schools to be enough ?